

# ನಮ್ಮ ಭೂಮಿ

## ದುಡಿಯುವ ಮಕ್ಕಳಿಗೆ ಕಾಳಜಿಯ ಮಡಿಲು

**ಶಿಕ್ಷಣದಿಂದ ವಂಚಿತರಾದ ಮಕ್ಕಳಿಗೆ ಕಲಿಕೆ ಹಾಗೂ ಹೊಸ ಬದುಕನ್ನು ಖಾತರಿಗೊಳಿಸುವ ವಿಶಿಷ್ಟ ಸಂಸ್ಥೆ 'ನಮ್ಮ ಭೂಮಿ'. ಕುಂದಾಪುರ ಸಮೀಪದ ಹಟ್ಟಿಯಂಗಡಿ ಬಳಿ ಇರುವ ಈ ಕಲಿಕಾ ಸಂಸ್ಥೆಗೆ ಈಗ ಮೂವತ್ತರ ಹರೆಯ.**

■ ಡಾ. ನಿರಂಜನ ವಾನಳ್ಳಿ



ಕುಂದಾಪುರ ತಾಲೂಕಿನ ಪ್ರಸಿದ್ಧ ಗಣಪತಿ ಕ್ಷೇತ್ರ ಹಟ್ಟಿಯಂಗಡಿಗೆ ತಿರುಗುವ ಮಾರ್ಗದಿಂದ ನೂರು ಮೀಟರ್ ಮುಂದಕ್ಕೆ ಎಡಗಡೆಗೆ 'ನಮ್ಮ ಭೂಮಿ' ಎಂಬ ಫಲಕ ಕಾಣುತ್ತದೆ. ಒಳಗೆ ಬಂದರೆ ವಿಶಿಷ್ಟವಾದ ಲೋಕವೊಂದು ತೆರೆದುಕೊಳ್ಳುತ್ತದೆ. ಅಲ್ಲಿನ ಕಟ್ಟಡಗಳು ಭಿನ್ನವಾಗಿವೆ. ಪ್ರಕೃತಿಗೆ ಹತ್ತಿರವೆಂದು ಮೇಲ್ನೋಟಕ್ಕೇ ಕಾಣುತ್ತವೆ.

'ನಮ್ಮ ಭೂಮಿ'ಯ ಆರು ಎಕರೆ ಭೂಮಿ ಸೂರ್ಯನ ಬಿಸಿಲು ಇಣುಕದ ಹಾಗೆ ಮರಗಿಡಗಳಿಂದ ತುಂಬಿಹೋಗಿದೆ. ಸಣ್ಣ ಸಣ್ಣ ಕುಟೀರಗಳು: ಸಂಪಿಗೆ, ಹಲಸು, ಕೇದಗೆ ಮುಂತಾಗಿ ಅವುಗಳ ಹೆಸರುಗಳು. ಅಲ್ಲಿ ದನಕರುಗಳ ಕೊಟ್ಟಿಗೆಯೂ, ಎರೆಹುಳು ಗೊಬ್ಬರದ ಘಟಕವೂ ಇದೆ. ಇತ್ತ ಬಂದರೆ ಅರ್ಧ ಚಂದ್ರಾಕಾರದ ಹೆಂಚಿನ ಕಟ್ಟಡ, ಒಳಗೆ ವಿಶಾಲ ಜಾಗ, ಕಿರು ರಂಗಸ್ಥಳ, ಅಡುಗೆ ಮನೆ. ಅಡುಗೆ ಮನೆಯ ಉಗಿಯಲ್ಲಿ ಅನ್ನ ಬೇಯುತ್ತಿದೆ. ಇನ್ನೊಂದರಲ್ಲಿ ಸಾಂಬಾರು ತಯಾರಾಗುತ್ತಿದೆ. ಸುಮಾರು ನೂರು ಜನರಿಗೆ ಮಧ್ಯಾಹ್ನದ ಊಟಕ್ಕೆ ಸಿದ್ಧತೆ ನಡೆದಿದೆ. ಮುಂದೆ ಬಂದರೆ 'ನಮ್ಮ ಅಂಗಡಿ' ಇದೆ. ಗೋಲಾಕಾರದ ಕಟ್ಟಡ. ಒಳಗೆ 'ನಮ್ಮ ಭೂಮಿ'ಯಲ್ಲಿ ತರಬೇತಿ ಪಡೆದ ಮಕ್ಕಳು ಹಾಗೂ ಅವರ ಕುಟುಂಬದ ಗ್ರಾಮೀಣ ಕೈಗಾರಿಕೆಗಳ ಉತ್ಪನ್ನಗಳ ಮಾರಾಟ.

ಇಡೀ ಆವರಣದಲ್ಲಿ ಭಿನ್ನತೆಯೇ ಮೂರ್ತಿವೆತ್ತಂತಿರುವ ಈ 'ನಮ್ಮ ಭೂಮಿ' ಹಾಗೂ ಅದರ ಸಂಗಾತಿಸಂಸ್ಥೆ 'ನಮ್ಮ ನಳಂದಾ ವಿದ್ಯಾಪೀಠ' ಇರುವ ರಾಜ್ಯ ಸಂಪನ್ಮೂಲ ಕೇಂದ್ರಕ್ಕೆ